

# ಡಿಸಿ ಸಂಜನಾ ಸಂಕಲ್ಪಕ್ಕೊಲಿದ ರ‍್ಯಾಂಕ್

**ಕೊಟ್ಟೂರಿನ ಇಂದು ಸ್ವತಂತ್ರ ಪಿಯು ಕಾಲೇಜಿನ ಎಲ್.ಆರ್. ಸಂಜನಾ ಬಾಯಿ ಪಿಯುಸಿ ಕಲಾ ವಿಭಾಗದಲ್ಲಿ 600ಕ್ಕೆ 597 ಅಂಕಗಳನ್ನು ಪಡೆದು ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾರೆ. ಯಶಸ್ಸಿನ ಕುರಿತ ಸಂಜನಾ ಅವರ ಮಾತುಗಳು ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕ.**

■ ರಾಘವೇಂದ್ರ ಕೆ. ತೊಗರ್ಸಿ

**ಪಿಯುಸಿ ಫಲಿತಾಂಶ: ಸಂಜನಾ ಬಾಯಿ ಸಂದರ್ಶನ**

◆ **ನಿಮ್ಮ ಪರಿಚಯ ಹೇಳಿ?**

ವಿಜಯನಗರ ಜಿಲ್ಲೆ, ಹೊಸಪೇಟೆ ತಾಲ್ಲೂಕಿನ ಮರಿಯಮ್ಮನಹಳ್ಳಿ ಹೋಬಳಿಯ ಗುಂಡಾ ಸ್ಟೇಷನ್ ನಮ್ಮೂರು. 20 ಮನೆಯಿರುವ ಪುಟ್ಟ ಹಳ್ಳಿ. ಪಕ್ಕದಲ್ಲಿ ರೈಲ್ವೆ ನಿಲ್ದಾಣ ಇರುವುದರಿಂದ ನಮ್ಮೂರನ್ನು ಗುಂಡಾ ಸ್ಟೇಷನ್ ಎನ್ನುತ್ತಾರೆ. ಆ ಹೆಸರು ಹೇಗೆ ಬಂತು ಅನ್ನುವ ಹಿನ್ನೆಲೆ ಗೊತ್ತಿಲ್ಲ. ಅಪ್ಪ ಎಲ್.ಕೆ. ರಾಮನಾಯ್ಕ್ ಹೆವಿ ಲೋಡೆಡ್ ಲಾರಿ ಓಡಿಸುತ್ತಾರೆ. ಒಮ್ಮೆ ಅವರು ಕೆಲಸಕ್ಕೆ ಹೋದರೆ ಮರಳಿ ಬರಲು ಸಾಮಾನ್ಯವಾಗಿ 15 ದಿನಗಳಾಗುತ್ತೆ. ಬಂದಾಗ ಎರಡು ದಿನ ಮಾತ್ರ ಮನೆಯಲ್ಲಿ ಇರುತ್ತಾರೆ. ರಾಜಸ್ಥಾನ, ಜೈಪುರ, ಗೋವಾ ಹೀಗೆ ದೂರದೂರಿಗೆ ಹೋಗುವುದರಿಂದ ಕುಟುಂಬದ ಕಾಳಜಿಯನ್ನು ನಮ್ಮ ಅಮ್ಮ ನೋಡಿಕೊಳ್ಳುತ್ತಾರೆ. ಅವರ ಹೆಸರು ಕಾವೇರಿ ಬಾಯಿ. ನಮ್ಮೂರಿಗೆ ಬಸ್ ಸಂಪರ್ಕ ಸರಿಯಿಲ್ಲ. ಓಡಾಡುವುದು ಕಷ್ಟ ಎಂದು ಪಿಯುಸಿಯನ್ನು ಹಾಸ್ಟೆಲಿನಲ್ಲಿಯೇ ಇದ್ದು ಓದಿದೆ. ಪೋಷಕರು ಎಷ್ಟೆಲ್ಲ ತೊಂದರೆಗಳ ನಡುವೆಯೂ ಖಾಸಗಿ ಹಾಸ್ಟೆಲ್‌ಗೆ ಸೇರಿಸಿದ್ದರು. ಕೊಟ್ಟೂರಿನ ಇಂದು ಸ್ವತಂತ್ರ ಪಿಯು ಕಾಲೇಜಿನಲ್ಲಿ ವ್ಯಾಸಂಗ ಮಾಡಿದೆ.

◆ **ನಿಮ್ಮ ಓದಿನ ಸ್ವರೂಪ ಹೇಗಿತ್ತು?**

ಮೊದಲ ರ‍್ಯಾಂಕ್ ಬರಲೇಬೇಕು ಎನ್ನುವ ಸಂಕಲ್ಪದಲ್ಲಿಯೇ ಓದಿದ್ದೆ. ಇದಕ್ಕೆ ಪ್ರೇರಣೆಯಾಗಿದ್ದು ನನ್ನ ಪ್ರಥಮ ವರ್ಷದ ಫಲಿತಾಂಶ. ನಾನು ಕಾಲೇಜಿಗೆ ಮೊದಲಿಗಳಾಗಿ ಪಾಸಾಗಿದ್ದರಿಂದ ಕಾಲೇಜು ಶುಲ್ಕದಲ್ಲಿ ವಿನಾಯಿತಿ ಸಿಕ್ಕಿತ್ತು. ಈ ಹಿಂದೆ ಒಂಬತ್ತು ವರ್ಷಗಳಿಂದ ನಮ್ಮ ಕಾಲೇಜಿಗೆ ಮೊದಲ ರ‍್ಯಾಂಕ್ ಬಂದಿತ್ತು. ಹತ್ತನೆಯದನ್ನು ನಾನೇ ಪಡೆಯಬೇಕು ಎಂದು ಫಿಕ್ಸ್ ಆದೆ. ಇದಕ್ಕೆ ಪ್ರೇರಣೆಯಾದ ಘಟನೆಯೊಂದಿದೆ. ಕಳೆದ ವರ್ಷ ಏಪ್ರಿಲ್ ತಿಂಗಳ ಒಂದು ದಿನ ಅಧ್ಯಾಪಕರಿಗೆ ಸ್ವೀಟ್ಸ್ ಕೊಡುವ ಸಂಬಂಧ ಕಾಲೇಜಿಗೆ ಹೋಗಿದ್ದೆ. ಅವತ್ತೇ ದ್ವಿತೀಯ ಪಿಯುಸಿಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ವಿದ್ಯಾರ್ಥಿನಿಗೆ ಸನ್ಮಾನ ಕಾರ್ಯಕ್ರಮ ನಡೆದಿತ್ತು. ನಾನೂ ಇದೇ ರೀತಿ ಸನ್ಮಾನಕ್ಕೆ ಪಾತ್ರ ಆಗಬೇಕು ಎಂದು ಅವತ್ತೇ ನಿರ್ಧರಿಸಿದ್ದೆ.

ಓದಿನ ಕ್ರಮ ಸರಳವಾಗಿತ್ತು. ದಿನಕ್ಕೆ ನಾಲ್ಕು ಗಂಟೆ ಓದುತ್ತಿದ್ದೆ. ರಾತ್ರಿ ಹೊತ್ತೇ ಅಧ್ಯಯನಕ್ಕೆ ಸೂಕ್ತ ಆಗುತ್ತಿತ್ತು. ಪರೀಕ್ಷಾ ದಿನಗಳಲ್ಲಿ ಮಾತ್ರ ಹಗಲೂ ಓದುತ್ತಿದ್ದೆ. ಓದುವಾಗ ಎಲ್ಲ ವಿಷಯಗಳಲ್ಲಿ ಮುಖ್ಯಾಂಶಗಳನ್ನು ಒಂದು ಪುಸ್ತಕದಲ್ಲಿ ಟಿಪ್ಪಣಿ ಮಾಡುತ್ತಿದ್ದೆ. ಆಗಾಗ ಅದನ್ನು ತಿರುವಿ ಹಾಕುತ್ತಿದ್ದೆ. ಅದೇ ನನ್ನ ಪುನರಾವರ್ತನೆ ಅಧ್ಯಯನದ ಮುಖ್ಯ ಸರಕು. ಅದರಲ್ಲಿ ಮುಖ್ಯ ಸಂಗತಿಗಳನ್ನು ಮಾತ್ರ ದಾಖಲಿಸುತ್ತಿದ್ದೆ. ಅವತ್ತಿನ ಪಾಠ ಅವತ್ತೇ ಓದಿರುತ್ತಿದ್ದೆ. ಎಲ್ಲ ಓದಿದ್ದರಿಂದ ಪರೀಕ್ಷೆಯ ಸಮಯದಲ್ಲಿ ನನ್ನ ಮುಖ್ಯಾಂಶಗಳ ಟಿಪ್ಪಣಿಗೆ ಒತ್ತುಕೊಡುತ್ತಿದ್ದೆ.

◆ **ನಿಮಗೆ ಕಷ್ಟ ಅನ್ನಿಸಿದ ವಿಷಯ ಯಾವುದು?**

ಆರಂಭದಲ್ಲಿ ರಾಜ್ಯಶಾಸ್ತ್ರ ಸ್ವಲ್ಪ ಕಷ್ಟವಾಗಿತ್ತು. ಅದನ್ನೇ ಪ್ರೀತಿಸಲು ಶುರುಮಾಡಿದೆ. ನಂತರ ಅದು ಇನ್ನೂ ಸುಲಭ ಅನ್ನಿಸತೊಡಗಿತು. ಉಳಿದ ಯಾವ ವಿಷಯಗಳೂ ಕಷ್ಟ ಎನಿಸಿರಲಿಲ್ಲ. ರಾಜ್ಯಕ್ಕೆ ನಾನೇ ಮೊದಲಿಗಳು ಆಗುತ್ತೇನೆ ಎನ್ನುವ ಖಚಿತ ನಿಲುವು ನನಗಿತ್ತು. ಪರೀಕ್ಷೆ ಬರೆದ ನಂತರ ಕನ್ನಡ ಭಾಷಾ ಪತ್ರಿಕೆಯಲ್ಲಿ ಏನಾದರೂ ಕಡಿಮೆ ಆಗಬಹುದೇ ಎನ್ನುವ ಆತಂಕವೂ ಇತ್ತು. ಸಾಧ್ಯವಾದಷ್ಟು ನೀಟಾಗಿಯೇ ಬರೆದಿದ್ದೆ. ನನ್ನ ಅಳುಕಿನಂತೆ ಏನೂ ತೊಂದರೆ ಆಗಲಿಲ್ಲ.

◆ **ಪಠ್ಯದಲ್ಲಿ ಈ ಅಂಶವೇ ಮುಖ್ಯ ಎನ್ನುವುದು ಹೇಗೆ ಗೊತ್ತಾಗುತ್ತಿತ್ತು?**

ನಮ್ಮ ಪಠ್ಯ ಬದಲಾವಣೆ ಆಗಿದ್ದು 2015ರಲ್ಲಿ. ಅಲ್ಲಿಂದ ಕಳೆದ ವರ್ಷದ ತನಕ ಎಲ್ಲ ಪ್ರಶ್ನೆ ಪತ್ರಿಕೆಯನ್ನು ತೆಗೆದುಕೊಂಡಿದ್ದೆ. ಪುನರಾವರ್ತಿತ ಪ್ರಶ್ನೆಗಳನ್ನು ಡಿಟೇಲ್ ಆಗಿ ಅಧ್ಯಯನ ಮಾಡುತ್ತಿದ್ದೆ. ಅಧ್ಯಾಪಕರು ಪಾಠವನ್ನು ಮಾಡುವಾಗ ಅಂತಹ ಕೆಲವು ಅಂಶಗಳನ್ನು ಹೇಳುತ್ತಿದ್ದರು. ಅವರು ನೆನಪಿನಲ್ಲಿ ಇಟ್ಟುಕೊಳ್ಳಲು ಕೆಲವೊಂದು ಸೂತ್ರವನ್ನು (ಕೀ ಪಾಯಿಂಟ್) ಕೊಡುತ್ತಿದ್ದರು. ಅದೆಲ್ಲವನ್ನೂ ಚೆನ್ನಾಗಿ ನೋಡಿಕೊಳ್ಳುತ್ತಿದ್ದೆ. ತರಗತಿಯಲ್ಲಿ ಗಮನ ಇಟ್ಟು ಪಾಠವನ್ನು ಕೇಳುತ್ತಿದ್ದೆ. ಓದುವಾಗ ತರಗತಿಯ ಚಿತ್ರಣವನ್ನು ಕಲ್ಪಿಸಿಕೊಂಡು ಓದುತ್ತಿದ್ದೆ. ಅದು ನನಗೆ ಅರ್ಥ ಮಾಡಿಕೊಳ್ಳಲು ತುಂಬ ಸಹಾಯ ಆಗುತ್ತಿತ್ತು.

◆ **ನಿಮ್ಮ ಮುಂದಿನ ಕನಸು ಏನು?**

ಮುಂದಿನ ಗುರಿ ಐಎಎಸ್. ಬಿಎನಲ್ಲಿ ಯಾವ ವಿಷಯವನ್ನು ಅಧ್ಯಯನ ಮಾಡಬೇಕು ಎನ್ನುವುದು ಇನ್ನೂ ಗೊತ್ತಿಲ್ಲ. ಇಲ್ಲಿಯ ತನಕ ಪೋಷಕರು, ಚಿಕ್ಕಪ್ಪ, ಅಧ್ಯಾಪಕರ ಸಲಹೆಯನ್ನು ಪಡೆದು ಓದಿದ್ದೇನೆ. ಐಎಸ್ಎಸ್ ಕಲ್ಪನೆಯೂ ಇಲ್ಲದಿದ್ದಾಗ ಡಿಸಿ ಆಗಬೇಕು ಅನ್ನುತ್ತಿದ್ದೆ. ಆಗೆಲ್ಲ 'ಡಿಸಿ ಸಂಜನಾ' ಎಂದು ಮನೆಯಲ್ಲಿ ರೇಗಿಸುತ್ತಿದ್ದರು. ತಿಳಿವಳಿಕೆ ಬೆಳೆದ ನಂತರ ಯುಪಿಎಸ್‌ಸಿ ಪರೀಕ್ಷೆಯ ಕಷ್ಟ ಏನೆಂದು ಗೊತ್ತಾಯಿತು. ಆಗ ಮಿಲಿಟರಿ ಇಲ್ಲವೆ ಪೊಲೀಸ್ ಅಧಿಕಾರಿ ಆದರೆ ಸಾಕು ಅನ್ನುವ ಮನಸು ಮಾಡಿದ್ದೆ. ಐಎಎಸ್ ಅಧಿಕಾರಿಯ ಸ್ಥಾನಮಾನ, ಜವಾಬ್ದಾರಿ ಕಂಡು ಅದೇ ಆಗಬೇಕು ಎಂದು ಅನ್ನಿಸುತ್ತಿದೆ. ಆ ನಿಟ್ಟಿನಲ್ಲಿಯೇ ಯೋಚಿಸುತ್ತಿದ್ದೇನೆ.

ಪ್ರತಿಕ್ರಿಯಿಸಿ: **feedback@sudha.co.in**